# ಅನಿಯಂತ್ರಿತ ಠೇವಣಿ ಯೋಜನೆ ನಿಷೇಧ ಮಸೂದೆ ಮಂಡನೆ

**ದೆಹಲಿ:** 'ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಮಸೂದೆ, 2019' ಅನ್ನು ಹಣಕಾಸು ಖಾತೆ ರಾಜ್ಯ ಸಚಿವ ಅನುರಾಗ್ ಠಾಕೂರ್ ಸೋಮವಾರ ರಾಜ್ಯಸಭೆಯಲ್ಲಿ ಮಂಡಿಸಿದರು.

ವಂಚಕ ಠೇವಣಿ ಯೋಜನೆಗಳನ್ನು ನಿಗ್ರಹಿಸಲು ಮತ್ತು ಮೋಸಕ್ಕೊಳಗಾಗುವ ಹೂಡಿಕೆದಾರರನ್ನು ರಕ್ಷಿಸಲು ಫೆಬ್ರವರಿಯಲ್ಲಿ ಹೊರಡಿಸಲಾದವಿಶೇಷಾಜ್ಞೆಯನ್ನು ಬದಲಿಸುವ ಗುರಿ ಹೊಂದಿರುವ ಈ ಮಸೂದೆಯನ್ನು ಲೋಕಸಭೆ ಜು. 24ರಂದು ಸರ್ವಾನುಮತದಿಂದ ಅಂಗೀಕರಿಸಿತ್ತು.

ಸದನದಲ್ಲಿ ಮಸೂದೆ ಮಂಡನೆಯಾಗುತ್ತಿದ್ದಂತೆ ಮಾತನಾಡಿದ ಕಾಂಗ್ರೆಸ್ ಸದಸ್ಯ ಟಿ. ಸುಬ್ಬರಾಮಿರೆಡ್ಡಿ, 'ಬ್ಯಾಂಕಿಂಗೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ) ಕೆಟ್ಟ ಹಂತವನ್ನು ದಾಟುತ್ತಿದ್ದು, ಇವಕ್ಕೆ ಸಂಬಂಧಿಸಿದ ಕಾನೂನುಗಳನ್ನು ಸರಕಾರ ಮರುವ್ಯಾಖ್ಯಾನಿಸುವ ಅಗತ್ಯವಿದೆ. ಏಕೆಂದರೆ ಈ ಕಾನೂನುಗಳು ಅಸ್ಪಷ್ಟವಾಗಿವೆ' ಎಂದರು.




'ಎನ್‌ಬಿಎಫ್‌ಸಿಗಳು ದೇಶದ ಆರ್ಥಿಕತೆಗೆ ಕೊಡುಗೆ ನೀಡುತ್ತಿವೆ; ಎಲ್ಲ ಎನ್‌ಬಿಎಫ್‌ಸಿಗಳೂ ಮೋಸ ಮಾಡುತ್ತವೆ ಎಂಬುದು ಸರಿಯಲ್ಲ. ಈ ಪೈಕಿ ಕೆಲವು ಸಂಸ್ಥೆಗಳು ಕಾನೂನಿನ ಅನುಸಾರ ವ್ಯವಹಾರ ನಡೆಸುತ್ತಿದ್ದು, ಸರಕಾರ ಇವುಗಳ ಹಿತಾಸಕ್ತಿಯನ್ನು ರಕ್ಷಿಸಬೇಕು' ಎಂದು ರೆಡ್ಡಿ ಹೇಳಿದರು.

ಮಸೂದೆ ಕುರಿತು ಮಾತನಾಡಿದ ಬಿಜೆಪಿ ಸದಸ್ಯ ಸುರೇಶ್ ಪ್ರಭು, 'ಠೇವಣಿ ಕ್ರೋಢೀಕರಣದ ವೇಳೆ ಯಾವುದೇ ಮೋಸವಾಗದಂತೆ ಸರಕಾರ ಖಚಿತಪಡಿಸಿಕೊಳ್ಳಬೇಕು, ವಂಚಕರಿಗೆ ಕಠಿಣ ಶಿಕ್ಷೆ ವಿಧಿಸಬೇಕು' ಎಂದರು.

'ಸಂಸತ್ತಿನ ಪರಿಶೀಲನೆಯ ನಂತರ ಸದನದಲ್ಲಿ ಮಂಡಿಸಲಾಗಿರುವುದರಿಂದ ಇದೊಂದು ಉತ್ತಮವಾದ ಮತ್ತು ಬಿಗಿ ನಿಯಮದ ಮಸೂದೆಯಾಗಿದೆ' ಎಂದು ಹೇಳಿದ ಅಖಿಲ ಭಾರತ ತೃಣಮೂಲ ಕಾಂಗ್ರೆಸ್ ಸದಸ್ಯ ಡೆರೆಕ್ ಒ'ಬ್ರಿಯೆನ್, '49 ಸಾವಿರ ಕೋಟಿ ರು. ಮೊತ್ತದ ಪರ್ಲ್ ಗ್ರೂಪ್ ಹಗರಣ, ದೇಶದ ಐದು ಲಕ್ಷ ಜನರನ್ನು ವಂಚಿಸಿದೆ' ಎಂದರು.

ಸಮಾಜವಾದಿ ಪಕ್ಷದ ವಿಶಂಭರ್ ಪ್ರಸಾದ್ ನಿಶಾದ್, '1947ರ ನಂತರದ ಇಂತಹ ಕಂಪನಿಗಳು ಮತ್ತು ಅವುಗಳ ಪ್ರವರ್ತಕರು ಮಾಡಿದ ಎಲ್ಲ ವಂಚನೆಗಳ ಪಟ್ಟಿಯನ್ನೂ ಸರಕಾರ ಸಿದ್ಧಪಡಿಸಬೇಕು' ಎಂದು ಒತ್ತಾಯಿಸಿದರು.

'ಕಮಿಷನ್ ಏಜೆಂಟರನ್ನು ಬಳಸಿಕೊಂಡು ಠೇವಣಿ ಸ್ವೀಕರಿಸುವ ವ್ಯಕ್ತಿಗಳ ಜಾಲವಿದೆ' ಎಂದ ಟಿಆರ್‌ಎಸ್ ಶಾಸಕ ಬಂಡಾ ಪ್ರಕಾಶ್, 'ಈ ಯೋಜನೆಗಳಲ್ಲಿ ಜನರು ಎಷ್ಟು ಹೂಡಿಕೆ ಮಾಡುತ್ತಿದ್ದಾರೆ ಎಂಬುದನ್ನು ಅಳೆಯಲು ಯಾವುದೇ ಅಧಿಕೃತ ಮಾಪಕಗಳಿಲ್ಲ' ಎಂದು ವಿಷಾದಿಸಿದರು.